Regarding Land tribunals the non-official members have already been nominated for 189 Land Tribunals in the State. After the new coalition Government came into existence the Land Tribunals of 107 talukas have been reconstituted by nominating new non-official members.

b) No.

c) The proposals for constitution of committees for regularization of unauthorized cultivation in respect of other talukas is under consideration of Government and orders will be issued in due course.

There are 189 Land Tribunals existing in the State. Out of them the Land Tribunals of 107 talukas have been reconstituted by nominating new non-official members. In respect of other tribunals the previous members will contine till new non-official members are nominated because these committees are permanent in nature and till the new members assume charge the previous members will continue.

237 (630) – ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) –ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಿಂದ ಬಗರ್ ಹುಕುಂ ಸಮಿತಿಗಳನ್ನು ರಚಿಸದಿರುವುದರಿಂದ ಸಾಗುವಳಿ ಮಾಡುತ್ತಿರುವ ಸಾವಿರಾರು ರೈತರಿಗೆ ಭೂ ಮಂಜೂರಾತಿಯ ವಿಷಯವನ್ನು ನೆನೆಗುದಿಗೆ ಬೀಳುವಂತೆ ಮಾಡಿರುವುದು ಸಮಂಜಸವೆ ;

ಆ) ಈ ಸಮಿತಿಗಳ ರಚನೆ ಈಗ ಸರ್ಕಾರದ ಯಾವ ಹಂತದಲ್ಲಿದೆ ;

ಇ) ಯಾವ ಕಾಲ ಮಿತಿಯೊಳಗಾಗಿ ಈ ಸಮಿತಿಗಳನ್ನು ರಚಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಹೊಸ ಸಮ್ಮಿಶ್ರ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಎಲ್ಲಾ ತಾಲ್ಲೂಕುಗಳಿಗೂ ಬಗರ್ ಹುಕುಂ ಸಮಿತಿಗಳನ್ನು ನೇಮಿಸಲು ಕ್ರಮ ಕೈಗೊಂಡಿದ್ದು, ಈಗಾಗಲೇ 100 ತಾಲ್ಲೂಕುಗಳಿಗೆ ಬಗರ್ ಹುಕುಂ ಸಮಿತಿಗಳನ್ನು ರಚಿಸಲಾಗಿದ್ದು, ಉಳಿದ ತಾಲ್ಲೂಕುಗಳಿಗೂ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ, ಭೂ ಮಂಜೂರಾತಿ ವಿಷಯ ನೆನಗುದಿಗೆ ಬೀಳುವ ಅಂಶ ಉದ್ಭವವಾಗುವುದಿಲ್ಲ.

ಆ) ಉಳಿದಿರುವ ತಾಲ್ಲೂಕುಗಳಿಗೂ ಸಮಿತಿಗಳನ್ನು ರಚಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಅತೀ ಶೀಘ್ರದಲ್ಲಿಯೇ ಈ ಸಮಿತಿಗಳನ್ನು ರಚಿಸಲಾಗುವುದು.

238 (631) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಕೀಕೃತ ಪಹಣಿಯಲ್ಲಿ ಕೈತಪ್ಪಿನಿಂದ ಆದ ಅಥವಾ ತಿದ್ದುಪಡಿಗೆ ಒಳಪಡಿಸಬಹುದಾದಂತಹ ಪಹಣಿಗಳನ್ನು ಉಪ ವಿಭಾಗಾಧಿಕಾರಿಗಳು ಸರಿಪಡಿಸುವ ಆದೇಶ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಮೊದಲಿನಂತೆಯೇ ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ನೀಡಿದರೆ ಆಗುವ ನ್ಯೂನತೆಗಳೇನು ;

ಇ) ಇಂತಹ ತಿದ್ದುಪಡಿಗಳಲ್ಲಿ ಪ್ರತ್ಯೇಕಿಸಿರುವ ಎ ಮತ್ತು ಬಿ ವರ್ಗದ ತಿದ್ದುಪಡಿಗಳು ಯಾವುವು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಇಲ್ಲ

ಆ) ಈ ಹಿಂದೆ, ತಿದ್ದುಪಡಿ ತಂತ್ರಾಂಶವು ಅಧಿಕವಾಗಿ ದುರುಪಯೋಗವಾಗುತ್ತಿತ್ತು. ಇದನ್ನು ತಡೆಹಿಡಿಯಲು, ಎಲ್ಲಾ ತಿದ್ದುಪಡಿ ಕಾರ್ಯವನ್ನು ತಾಲ್ಲೂಕು ಸಿಬ್ಬಂದಿ ಹಾಗೂ ಗ್ರಾಮ ಲೆಕ್ಕಿಗರು/ಕಂದಾಯ ನಿರೀಕ್ಷಕರು ಕೈಗೊಳ್ಳುತ್ತಿದ್ದಾಗ್ಯೂ, ಕೇವಲ ಅಂತಿಮ ಅನುಮೋದನೆಯನ್ನು ಮಾತ್ರ ಉಪ ವಿಭಾಗಾಧಿಕಾರಿಗಳು ನೀಡುತ್ತಿದ್ದಾರೆ.

ಇ) ತಿದ್ದುಪಡಿಗಳನ್ನು ಯಾವುದೇ ವರ್ಗ ನೀಡಿ ಪ್ರತ್ಯೇಕಿಸುತ್ತಿಲ್ಲ.